# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 968
ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಚಿಕ್ಕನಾಯಕನಹಳ್ಳಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಡಿಪೋ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; ಚಿಕ್ಕನಾಯಕನ ಹಳ್ಳಿಗೆ ಬಸ್ ಡಿಪೋ ನೀಡಲು ಸರ್ಕಾರ ಯಾವಾಗ ತೀರ್ಮಾನ ತೆಗೆದುಕೊಂಡಿದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ನಡೆದಿರುತ್ತದೆಯೇ; (ನಡೆದಿದ್ದಲ್ಲಿ, ವಿವರಗಳನ್ನು ಒದಗಿಸುವುದು) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಚಿಕ್ಕನಾಯಕನಹಳ್ಳಿಯಲ್ಲಿ ಬಸ್ ಘಟಕ ನಿರ್ಮಿಸಲು 2021-22ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ಸಂಬಂಧ ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ನಿಯಮಾನುಸಾರ ಗುತ್ತಿಗೆದಾರರನ್ನು ನೇಮಿಸಲಾಗಿರುತ್ತದೆ. |
| ಆ. | ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳ ನಿರ್ವಹಣೆ ಮಾಡಲಾಗುತ್ತಿದೆ; (ವಿವರಗಳನ್ನು ಒದಗಿಸುವುದು) | ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ತುಮಕೂರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ತಿಪಟೂರು ಮತ್ತು ಇತರ ಸ್ಥಳಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 349 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಚಿಕ್ಕನಾಯಕನ ಹಳ್ಳಿಯಿಂದ ತುಮಕೂರು, ಬೆಂಗಳೂರು, ಚಿತ್ರದುರ್ಗ, ದಾವಣಗೆರೆ ಹಾಗೂ ತಿಪಟೂರಿಗೆ ನೇರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. (ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ).<br><br>ಮುಂದುವರೆದು, ಚಿಕ್ಕನಾಯಕನ ಹಳ್ಳಿಯಿಂದ ಕೆ.ಬಿ.ಕ್ರಾಸ್‌ಗೆ ಹಾಗೂ ಕೆ.ಬಿ.ಕ್ರಾಸ್‌ನಿಂದ ಶಿವಮೊಗ್ಗಕ್ಕೆ ಸಾಕಷ್ಟು ಸಾರಿಗೆಗಳು ಕಾರ್ಯಾಚರಣೆಯಲಿದ್ದು, ಶಿವಮೊಗ್ಗಕ್ಕೆ ಪ್ರಯಾಣಿಸುವ ಪ್ರಯಾಣಿಕರು ಸದರಿ ಸಾರಿಗೆಗಳ ಉಪಯೋಗ ಪಡೆಯಬಹುದಾಗಿದೆ.<br><br>ಚಿಕ್ಕನಾಯಕನಹಳ್ಳಿಯಿಂದ ಇತರೆ ತಾಲ್ಲೂಕು/ಜಿಲ್ಲಾ ಸ್ಥಳಗಳಿಗೆ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕು ಗ್ರಾಮಾಂತರ ಪ್ರದೇಶಗಳಿಗೆ ಒಟ್ಟಾರೆ 349 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಪ್ರಯಾಣಿಕರ ಬೇಡಿಕೆ/ಅವಶ್ಯಕತೆಗೆ ಅನುಗುಣವಾಗಿ ಹೆಚ್ಚಿನ ಸೌಲಭ್ಯ ಒದಗಿಸುವ ಸಲುವಾಗಿ ಚಿಕ್ಕನಾಯಕನಹಳ್ಳಿಯಲ್ಲಿ ಬಸ್ ಘಟಕ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. |
| ಇ. | ತಾಲ್ಲೂಕು ಕೇಂದ್ರವಾದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಿಂದ ತುಮಕೂರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ತಿಪಟೂರು ಮತ್ತು ಇತರ ಭಾಗಗಳಿಗೆ ರಸ್ತೆ ಸಾರಿಗೆ ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ; | |
| ಈ. | ಈ ಪ್ರದೇಶದಲ್ಲಿ ಸಾರಿಗೆ ಸೌಲಭ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; ಬಂದಿದ್ದಲ್ಲಿ, ಸರ್ಕಾರ ಪೂರ್ಣ ಪ್ರಮಾಣದಲ್ಲಿ ಯಾವಾಗ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಒದಗಿಸುವುದು; | |
| ಉ. | ಚಿಕ್ಕನಾಯಕನಹಳ್ಳಿಯಲ್ಲಿ ಉದ್ದೇಶಿತ ಬಸ್ ಡಿಪೋ ಕಾಮಗಾರಿ ನಿಧಾನ ಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಸ್ ಡಿಪೋ ಕಾಮಗಾರಿಯನ್ನು | ಸದರಿ ಬಸ್ ಡಿಪೋ ಕಾಮಗಾರಿಗಾಗಿ ಟೆಂಡರ್ ಮೂಲಕ ಗುತ್ತಿಗೆದಾರರನ್ನು ಆಯ್ಕೆ ಮಾಡಿ ಕಾಮಗಾರಿ ಪ್ರಾರಂಭಿಸಲು ದಿನಾಂಕ:20.01.2023ರಂದು ಕಾರ್ಯಾದೇಶ |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ; ಸದರಿ ಕಾಮಗಾರಿಗೆ ಮಂಜೂರಾಗಿರುವ ಅನುದಾನವೆಷ್ಟು; ಬಿಡುಗಡೆಯಾಗಿರುವ ಅನುದಾನವೆಷ್ಟು; ಬಾಕಿ ಇರುವ ಕಾಮಗಾರಿ ಎಷ್ಟು? (ಗುತ್ತಿಗೆದಾರರ ವಿವರಗಳ ಸಮೇತ ಪೂರ್ಣ ಮಾಹಿತಿಯನ್ನು ಒದಗಿಸುವುದು) | ನೀಡಲಾಗಿರುತ್ತದೆ. ಆದರೆ, ಘಟಕ ನಿರ್ಮಾಣಕ್ಕೆ ಮಂಜೂರಾದ ನಿವೇಶನದಲ್ಲಿ ಹೇಮಾವತಿ ನಾಲೆ ಹಾದು ಹೋಗುತ್ತಿದ್ದುದರಿಂದ ನಿಗಮದ ಬಸ್ಸುಗಳು ವ್ಯವಸ್ಥಿತವಾಗಿ ಸಂಚರಿಸಲು ಬಾಕ್ಸ್ ಕೆನಾಲ್ ಹಾಗೂ ಕಲ್ವರ್ಟ್ ನಿರ್ಮಾಣ ಮಾಡುವುದು ಸೇರಿದಂತೆ, ಭಾಗಾಂಶ ಪರ್ಯಾಯ ನಿವೇಶನವನ್ನು ಮಂಜೂರು ಮಾಡುವ ಬಗ್ಗೆ ಹಾಗೂ ಘಟಕದ ನಿವೇಶನದ ಮಧ್ಯದ ಭಾಗ ಮತ್ತು ಘಟಕಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಸಮಸ್ಯೆ ಉದ್ಭವಿಸಿದ್ದರಿಂದ ಘಟಕ ನಿರ್ಮಾಣ ಕಾಮಗಾರಿ ಪ್ರಾರಂಭಿಸಲು ಆಯ್ಕೆಯಾದ ಗುತ್ತಿಗೆದಾರರಿಗೆ ನಿವೇಶನ ಹಸ್ತಾಂತರಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಸಂಪರ್ಕ ರಸ್ತೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ದಿನಾಂಕ:09-10-2025ರಂದು ನಿವೇಶನವು ನಿಗಮಕ್ಕೆ ಹಸ್ತಾಂತರವಾಗಿರುತ್ತದೆ. ನಿಗಮಕ್ಕೆ ನಿವೇಶನ ಹಸ್ತಾಂತರವಾಗಿರದಿದ್ದ ಕಾರಣ, ಕಾಮಗಾರಿಯನ್ನು ಪ್ರಾರಂಭಿಸುವಲ್ಲಿ ವಿಳಂಬವಾಗಿರುತ್ತದೆ.<br><br>ಕಾಮಗಾರಿಯನ್ನು ತ್ವರಿತವಾಗಿ ಕೈಗೊಂಡು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಈ ಮಳೆಗಾಲ ಬಿಟ್ಟು 9 ತಿಂಗಳ ಕಾಲಾವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.<br><br>ಸದರಿ ಕಾಮಗಾರಿಗೆ ಮಂಜೂರಾಗಿರುವ ಅನುದಾನ ರೂ.578.92 ಲಕ್ಷಗಳಲ್ಲಿ 2024-25ನೇ ಸಾಲಿನವರೆಗೂ ಬಿಡುಗಡೆಯಾಗಿರುವ ಅನುದಾನ ರೂ.462.38 ಲಕ್ಷಗಳ ಕಾಮಗಾರಿಯು ಪ್ರಾರಂಭಿಕ ಹಂತದಲ್ಲಿದ್ದು, ಮೆ\|\| ಅಭಿವೃದ್ಧಿ ಕಾನ್‌ಫ್ರಾಟೆಕ್ ಪ್ರೈ ಲಿಮಿಟೆಡ್ ಬೆಂಗಳೂರು ಇವರು ಕಾಮಗಾರಿಯ ಗುತ್ತಿಗೆದಾರರಾಗಿದ್ದು, ಕಾಮಗಾರಿಯ ಮುಖ್ಯ ಕಟ್ಟಡದ ಪಾಯಕ್ಕಾಗಿ ಮಣ್ಣು ಅಗೆತದ ಕೆಲಸ ಪ್ರಗತಿಯಲ್ಲಿರುತ್ತದೆ. ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 38 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

"ಅನುಬಂಧ

ಚಿಕ್ಕನಾಯಕನಹಳ್ಳಿಯಿಂದ ಹಾಗೂ ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಕಾರ್ಯಾಚರಣೆ ಮಾಡುತ್ತಿರುವ ಸಾರಿಗೆಗಳ ವಿವರ

| ಕ್ರ ಸಂ | ಮಾರ್ಗ | ಏಕ ಸುತ್ತುವಳಿ |
|---|---|---|
| 1 | ಚಿಕ್ಕನಾಯಕನಹಳ್ಳಿ-ತುಮಕೂರು-ಬೆಂಗಳೂರು | 03 |
| 2 | ಹೊಸದುರ್ಗ-ಚಿಕ್ಕನಾಯಕನಹಳ್ಳಿ-ತುಮಕೂರು-ಬೆಂಗಳೂರು | 74 |
| 3 | ಹುಳಿಯಾರು-ಚಿಕ್ಕನಾಯಕನಹಳ್ಳಿ-ಬೆಂಗಳೂರು | 01 |
| 4 | ಹಂದನಕೆರೆ-ಚಿಕ್ಕನಾಯಕನಹಳ್ಳಿ-ಬೆಂಗಳೂರು | 01 |
| 5 | ಉಕ್ಕಡಗಾತ್ರಿ-ಚಿಕ್ಕನಾಯಕನಹಳ್ಳಿ-ಬೆಂಗಳೂರು | 01 |
| 6 | ದಾವಣಗೆರೆ-ಚಿಕ್ಕನಾಯಕನಹಳ್ಳಿ-ಬೆಂಗಳೂರು | 01 |
| 7 | ಮತ್ತೋಡ್-ಚಿಕ್ಕನಾಯಕನಹಳ್ಳಿ-ಬೆಂಗಳೂರು | 01 |
| 8 | ದಸೂಡಿ-ಚಿಕ್ಕನಾಯಕನಹಳ್ಳಿ-ಬೆಂಗಳೂರು | 01 |
| 9 | ಜೆ.ಸಿ.ಪುರ- ಚಿಕ್ಕನಾಯಕನಹಳ್ಳಿ-ಬೆಂಗಳೂರು | 01 |
| 10 | ಚಿತ್ರದುರ್ಗ-ಚಿಕ್ಕನಾಯಕನಹಳ್ಳಿ-ಮೈಸೂರು | 10 |
| 11 | ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 12 | ಹೊಸದುರ್ಗ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 13 | ಹರಿಹರ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 14 | ದಾವಣಗೆರೆ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 15 | ಹಿರಿಯೂರು-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 16 | ಮುಂಡರಗಿ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 17 | ಬಾಗಲಕೋಟೆ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 18 | ಧಾರವಾಡ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 19 | ಬಳ್ಳಾರಿ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 20 | ರಾಯಚೂರು-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 21 | ಮುದ್ದೇಬಿಹಾಳ-ಚಿಕ್ಕನಾಯಕನಹಳ್ಳಿ-ಮೈಸೂರು | 01 |
| 22 | ಮೈಸೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ | 10 |
| 23 | ಮೈಸೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ-ದಾವಣಗೆರೆ-ಹರಿಹರ | 01 |

| ಕ್ರ ಸಂ | ಮಾರ್ಗ | ಏಕ ಸುತ್ತುವಳಿ |
|---|---|---|
| 24 | ಮೈಸೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ-ದಾವಣಗೆರೆ | 01 |
| 25 | ಮೈಸೂರು-ಚಿಕ್ಕನಾಯಕನಹಳ್ಳಿ-ಹೊಸದುರ್ಗ-ದಾವಣಗೆರೆ | 01 |
| 26 | ಮೈಸೂರು-ಚಿಕ್ಕನಾಯಕನಹಳ್ಳಿ-ದಾವಣಗೆರೆ-ಉಕ್ಕಡಗಾತ್ರಿ | 01 |
| 27 | ಮೈಸೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ-ದಾವಣಗೆರೆ-ಮುಂಡರಗಿ | 01 |
| 28 | ಮೈಸೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ-ದಾವಣಗೆರೆ-ಧಾರವಾಡ | 01 |
| 29 | ಮೈಸೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ-ದಾವಣಗೆರೆ-ಬಾಗಲಕೋಟೆ | 01 |
| 30 | ಮೈಸೂರು-ಚಿಕ್ಕನಾಯಕನಹಳ್ಳಿ-ಹಿರಿಯೂರು-ಬಳ್ಳಾರಿ | 01 |
| 31 | ಮೈಸೂರು-ಚಿಕ್ಕನಾಯಕನಹಳ್ಳಿ-ಹಿರಿಯೂರು-ರಾಯಚೂರು | 01 |
| 32 | ಯಡಿಯೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ-ದಾವಣಗೆರೆ- ಗದಗ | 38 |
| 33 | ಯಡಿಯೂರು-ಚಿಕ್ಕನಾಯಕನಹಳ್ಳಿ-ಚಿತ್ರದುರ್ಗ-ದಾವಣಗೆರೆ-ಸೌದತ್ತಿ | 16 |
| 34 | ಚಿಕ್ಕನಾಯಕನಹಳ್ಳಿ-ತಿಪಟೂರು | 18 |
| 35 | ಚಿಕ್ಕನಾಯಕನಹಳ್ಳಿ-ತುರುವೇಕೆರೆ | 8 |
| 36 | ಚಿಕ್ಕನಾಯಕನಹಳ್ಳಿ-ಸಿರಾ | 4 |
| 37 | ಚಿಕ್ಕನಾಯಕನಹಳ್ಳಿ-ಮತ್ತಿಘಟ್ಟ-ಹಂದನಕೆರೆ | 3 |
| 38 | ಚಿಕ್ಕನಾಯಕನಹಳ್ಳಿ-ಮಲ್ಲಿಗೆರೆ | 4 |
| 39 | ಚಿಕ್ಕನಾಯಕನಹಳ್ಳಿ-ಕಾತ್ರಿಕೆಹಾಳ್-ಕೊಂಡ್ಲಿಕ್ರಾಸ್ | 3 |
| 40 | ಚಿಕ್ಕನಾಯಕನಹಳ್ಳಿ-ಮೈಲುಕಟ್ಟೆ | 4 |
| 41 | ದಸೂಡಿ-ಚಿಕ್ಕನಾಯಕನಹಳ್ಳಿ-ತುಮಕೂರು | 01 |
| 42 | ತುಮಕೂರು-ಚಿಕ್ಕನಾಯಕನಹಳ್ಳಿ-ತುಮಕೂರು | 01 |
| 43 | ಚಿಕ್ಕನಾಯಕನಹಳ್ಳಿ ತಾಲ್ಲೂಕು ಗ್ರಾಮಾಂತರ ಪ್ರದೇಶಗಳಿಗೆ | 126 |

ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ)
ಕ.ರಾ.ರ.ಸಾ.ನಿಗಮ



File No. TD/38/TCQ/2026-Sec 1-Trans (Computer No. 2090308)
Generated from eOffice by ANANTHA NARAYANA N, TD-TDISEC-SR ASST1(N(AN), SENIOR ASSISTANT, TRANSPORTSEC on 03/03/2026 03:43 PM